# ಆಹಾ ಸುದ್ದಿ!

★ ಸಸಿತೋಟ

ಪ್ರಥಮ ನೋಟದಲ್ಲೇ ಪ್ರೇಮ ಎಂಬುದನ್ನು ಕೇಳಿದ್ದೇವೆ. ಆದರೆ ಪ್ರಥಮ ಮುತ್ತಿನ ಮೂಲಕ ಪ್ರೇಮ ಎಂದು ತಿದ್ದಲು ಹೊರಟಿದೆ ಅಮೆರಿಕಾದ ಟಿವಿ ಚಾನೆಲ್. 'ಕಿಸ್ ಬ್ಯಾಂಗ್ ಲವ್' ಎಂಬ ಕಾರ್ಯಕ್ರಮದಲ್ಲಿ ಅಪರಿಚಿತ ಹೆಣ್ಣು– ಗಂಡಿನ ಕಣ್ಣಿಗೆ ಬಟ್ಟೆ ಕಟ್ಟಿ ಪರಸ್ಪರ ಮುತ್ತಿಕ್ಕಿಸಿ ಪ್ರೇಮವನ್ನು ಉಕ್ಕಿಸಲು ಹೊರಟಿದೆ ಆ ಚಾನೆಲ್. ಫಿಸಿಕ್ಸ್‌ಗಿಂತ ಕೆಮೆಸ್ಟ್ರಿ ಮೇಲೆ ಹೆಚ್ಚು ನಂಬಿಕೆ ಇಟ್ಟಿರುವಂತಿದೆ ಕಾರ್ಯಕ್ರಮದ ಆಯೋಜಕರು.



ಅಮೆರಿಕ ಮತ್ತು ಯೂರೋಪ್ ದೇಶಗಳಲ್ಲಿ 'ಪ್ಯಾಂಟ್‌ರಹಿತ ಸುರಂಗ ರೈಲು ಸಂಚಾರ' ದಿನಾಚರಣೆ ಆರಂಭವಾಗಿದೆ. ಇಂತಹ ದಿನ ಎಂದು ನಿಗದಿಪಡಿಸದೆ ಇದ್ದಕ್ಕಿದ್ದಂತೆ ಒಬ್ಬ ಪ್ಯಾಂಟ್ ಕಳಚುವುದೇ ತಡ, ಉಳಿದವರೂ ಗಾಳಿಗೆ ತೂರಿ ಗಂಭೀರ ಮುಖ ಮಾಡಿಕೊಂಡು ಕುಳಿತುಕೊಳ್ಳುತ್ತಾರಂತೆ. ತಂಟೆಗೆ ಬಂದರೆ ಜೋಕೆ ಎಂಬ ಸಂದೇಶವಿರಬಹುದು.




ಲಂಡನ್ನಿನ ಅತಿ ಸಣ್ಣ ಗ್ರಂಥಾಲಯ. ಟೆಲಿಕಾಂ ಇಲಾಖೆ ಬಳಸಿ ಎಸೆದಿದ್ದ ಈ ಫೋನ್ ಬೂತ್ ಈಗ ಪುಸ್ತಕಗಳನ್ನು ಹೊತ್ತು ನಿಂತಿದೆ.



ಜಪಾನಿನ ದಾಖಲೆ ವೀರ ನಾಯಿ ಪುರಿನ್ ತನ್ನ ಒಡೆಯನ ಜೊತೆ ಸೇರಿ ಹಗ್ಗದ ಜಿಗಿತದಲ್ಲಿ ದಾಖಲೆ ಸ್ಥಾಪಿಸಿದೆಯಂತೆ. ಒಂದು ನಿಮಿಷದಲ್ಲಿ 58 ಬಾರಿ ಜಿಗಿದಿದೆ ಈ ಜೋಡಿ. ಈ ನಾಯಿ ಫುಟ್ಬಾಲ್ ಗೋಲು ತಡೆಯುವುದರಲ್ಲಿ, ಬಾಲ್ ಮೇಲೆ ಓಡುವುದರಲ್ಲಿ ಕೂಡಾ ದಾಖಲೆ ಸ್ಥಾಪಿಸಿದೆಯಂತೆ. ಸ್ವತಃ ದಾಖಲೆ ಮಾಡಲಾಗದಿದ್ದರೆ ಜೋಡಿಗೆ ಇಂತಹದೊಂದು ಹುಡುಕಿಕೊಂಡರೆ ಸಾಕು.



ಈತ 'ಉಪ್ಪಿನ ಬಾಯ್‌ಫ್ರೆಂಡ್' ಎಂದೇ ಖ್ಯಾತನಾದ ಟರ್ಕಿಯ ನುಸ್ರತ್ ಗೋಕ್ಸೆ. ಈ ಬಾಣಸಿಗ ಅಡುಗೆಗೆ ಸ್ಟೈಲ್ ಆಗಿ ಉಪ್ಪು ಸೇರಿಸುವ ವಿಚಿತ್ರ ಬಗೆಯ ಚಿತ್ರ ಇನ್‌ಸ್ಟಾಗ್ರಾಮಿನಲ್ಲಿ ವೈರಲ್ ಆಗಿದೆಯಂತೆ. ಈ ಬಾಯ್‌ಫ್ರೆಂಡ್‌ನಿಂದಾಗಿ ಅಡುಗೆ ಎಷ್ಟು ಉಪ್ಪು ತಿಂದು ಬಳಲಿದೆಯೋ!

ಜಪಾನಿನ ವ್ಯಕ್ತಿಯೊಬ್ಬ ತನ್ನ ಪತ್ನಿಯ ಜೊತೆ ಕಳೆದ 20 ವರ್ಷಗಳಿಂದ ಮಾತು ಬಿಟ್ಟಿದ್ದನಂತೆ. ಆಕೆ ಮಾತನಾಡಿದರೂ ಈತ ತಲೆ ಅಲ್ಲಾಡಿಸುವುದು, ಹೂಂ, ಉಹೂಂ ಎನ್ನುವುದು ಮಾಡುತ್ತಿದ್ದನಂತೆ. ಪತ್ನಿ ಮೂರು ಮಕ್ಕಳನ್ನು ಬೆಳೆಸುವುದರಲ್ಲಿ ನಿರತಳಾಗಿದ್ದಳು ಎಂಬ ಅಸೂಯೆಯಿಂದ ಹೀಗೆ ಮಾಡಿರುವುದಾಗಿ ಆತ ಹೇಳಿಕೊಂಡಿದ್ದಾನೆ. ಕೊನೆಗೂ ಮಗನ ಮಧ್ಯಸ್ಥಿಕೆಯಲ್ಲಿ ಟಿವಿ ಶೋ ಒಂದರಲ್ಲಿ ಪತ್ನಿಯ ಜೊತೆ ಮಾತನಾಡಲು ಆರಂಭಿಸಿದನಂತೆ. ಜಪಾನಿನಲ್ಲೂ ಮನೆಯೊಳಗಿನ ಮುನಿಸು ಟಿವಿಯತನಕ ಇದೆಯಂತಾಯ್ತು.